**ಪೊಲೀಸ್ ತರಬೇತಿ ಮಹಾವಿದ್ಯಾಲಯ**

ನಾಗನಹಳ್ಳಿ, **ಕಲಬುರಗಿ**-585102.

# ಪ್ರಶಿಕ್ಷಣಾರ್ಥಿಗಳ ಕೈಪಿಡಿ

# 2023

| ಪರಿವಿಡಿ | | |
|---|---|---|
| ಕ್ರ.ಸಂ. | ವಿಷಯ | ಪುಟ.ಸಂ. |
| 1 | **I . ಪೊಲೀಸ್ ತರಬೇತಿ ಮಹಾವಿದ್ಯಾಲಯ ನಾಗನಹಳ್ಳಿ, ಕಲಬುರಗಿ ಕಿರುಪರಿಚಯ:** | **1–2** |
| 2 | **II . ಹೊರಾಂಗಣ ತರಬೇತಿ** | **3–5** |
| 3 | **III . ಒಳಾಂಗಣ ತರಬೇತಿ** | **6–8** |
| 4 | **IV . ರಜೆ/ಕಾಯಿಲೆ/ಸ್ಪರ್ಧಾತ್ಮಕ ಪರೀಕ್ಷೆಗಳ ಅನುಮತಿ** | **9** |
| 5 | **V . ಮೆಸ್(ಭೋಜನಾಲಯ)** | **10** |
| 6 | **VI .ವಸತಿ ಗೃಹದ ಬಳಕೆ ಮತ್ತು ನಿರ್ವಹಣೆ** | **11** |
| 7 | **VII. ತರಬೇತಿ ಮಹಾವಿದ್ಯಾಲಯ ದಿಂದ ಹೊರಹೋಗಲು / ಸಂದರ್ಶಕರನ್ನು ಭೇಟಿಯಾಗಲು/ ಅಂಗಡಿಯಲ್ಲಿ ಅವಶ್ಯಕ ವಸ್ತುಗಳು ಖರೀದಿಸಲು ನಿಯಮಗಳು** | **12** |
| 8 | **VIII .ಪಿಟಿಸಿಯ ಅಧಿಕಾರಿ ಮತ್ತು ಎ.ಡಿ.ಐ ಗಳೊಂದಿಗೆ ಪ್ರಶಿಕ್ಷಣಾರ್ಥಿಗಳ ವರ್ತನೆ** | **13** |
| 9 | **IX .ಶಿಸ್ತು ಸಮಿತಿ** | **14** |

## I. ಪೊಲೀಸ್ ತರಬೇತಿ ಮಹಾವಿದ್ಯಾಲಯ ನಾಗನಹಳ್ಳಿ, ಕಲಬುರಗಿ ಕಿರುಪರಿಚಯ:

ಕರ್ನಾಟಕ ರಾಜ್ಯ ಪೋಲಿಸ್ ಇಲಾಖೆಯು ಒಂದು ಶಿಸ್ತಿನ ಇಲಾಖೆಯಾಗಿದ್ದು ಪೋಲಿಸ್ ಇಲಾಖೆಯ ಪಿಎಸ್ಐ(ನಾ)/ಆರ್‌ಎಸ್‌ಐ/ಸ್ಪೇ.ಆರ್‌ಎಸ್‌ಐ/ಡಿಎಸ್‌ಐ(ಸಿಐಡಿ)/ಪಿಎಸ್‌ಐ(ನಿ)/ಪಿಎಸ್‌ಐ(ಎಫ್‌ಪಿಬಿ)/ಪಿಎಸ್‌ಐ(ಗು) ಪಿಎಸ್‌ಐ(ಕೆ.ಎಸ್.ಐ.ಎಸ್.ಎಫ್)ಹುದ್ದೆಗೆ ನೇಮಕಗೊಂಡು ಬುನಾದಿ ತರಬೇತಿಗೆ ಪ್ರತಿಷ್ಠಿತ ಪೊಲೀಸ್ ತರಬೇತಿ ಮಹಾವಿದ್ಯಾಲಯ ನಾಗನಹಳ್ಳಿ ಕಲಬುರಗಿಗೆ ಆಗಮಿಸುತ್ತಿರುವ ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೆ ಪೊಲೀಸ್ ತರಬೇತಿ ಮಹಾವಿದ್ಯಾಲಯವು ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ ಹಾರ್ಧಿಕವಾಗಿ ಸ್ವಾಗತವನ್ನು ಕೊರುತ್ತದೆ.

ಬುನಾದಿ ತರಬೇತಿಗೆ ಆಗಮಿಸುವ ಪೊಲೀಸ್ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ನೀಡುವ ಗುರುತರ ಜವಾಬ್ದಾರಿಯನ್ನು ಹೊತ್ತು ಶಿಸ್ತುಬದ್ಧ ಸೇವೆಗೆ ಪೊಲಿಸ್ ಅಧಿಕಾರಿಗಳನ್ನು ಈ ಸಮಾಜಕ್ಕೆ ನೀಡುವಲ್ಲಿ ಪೊಲೀಸ್ ತರಬೇತಿ ಮಹಾವಿದ್ಯಾಲಯವು ಮಹತ್ತರವಾದ ಪಾತ್ರವನ್ನು ವಹಿಸುತ್ತಾ ಬಂದಿದೆ.

ಕಲ್ಯಾಣ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾದ ಸೂರ್ಯನಗರಿಯೆಂದೆ ಪ್ರಸಿದ್ಧಿ ಪಡೆದ ಕಲಬುರಗಿ ಜಿಲ್ಲೆಯಲ್ಲಿ 2003 ರಲ್ಲಿ ಪೊಲೀಸ್ ತರಬೇತಿ ಮಹಾವಿದ್ಯಾಲಯವು ಪ್ರಾರಂಭವಾಗಿದ್ದು, ಕಲಬುರಗಿ ನಗರದ ಹೊರವಲಯದ ವರ್ತುಲ ರಸ್ತೆಗೆ ಸಮಿಪದಲ್ಲಿರುವ ನಾಗನಹಳ್ಳಿ ಗ್ರಾಮಕ್ಕೆ ಹೊಂದಿಕೊಂಡು ರೈಲ್ವೆ ನಿಲ್ದಾಣದಿಂದ 4 ಕಿ.ಮೀ, ಕೇಂದ್ರ ಬಸ್ ನಿಲ್ದಾಣದಿಂದ 5 ಕೀ.ಮೀ, ಹಾಗೂ ವಿಮಾನ ನಿಲ್ದಾಣದಿಂದ 17 ಕಿ.ಮೀ, ಅಂತರದಲ್ಲಿ ಇರುತ್ತದೆ.

ಪೊಲೀಸ್ ಮಹಾವಿದ್ಯಾಲಯವು ಸುಮಾರು 96 ಎಕರೆ ಜಮೀನಿನಲ್ಲಿ ವಿಶಾಲವಾಗಿ ಹರಡಿರುತ್ತದೆ. ತರಬೇತಿಗೆ ಅಗತ್ಯವಾಗಿರುವ ಎಲ್ಲಾ ಅನುಕೂಲತೆಗಳನ್ನು ಹೊಂದಿರುತ್ತದೆ. ಸುಸಜ್ಜಿತವಾದ ಆಡಳಿತ ಕಛೇರಿ, ಒಳಾಂಗಣ ತರಬೇತಿಗಾಗಿ ಅಧ್ಯಯನ ಕೊಠಡಿಗಳು, ಸುಸಜ್ಜಿತವಾದ ಗ್ರಂಥಾಲಯ, ಕಂಪ್ಯುಟರ್ ಲ್ಯಾಬ್, ವ್ಯಾಯಾಮ ಶಾಲೆ, ಸಿಮುಲೇಟರ್, ಈಜುಕೊಳ, ವಿಶಾಲವಾದ 2 ಕವಾಯತು ಮೈದಾನಗಳು, ಉಪಹಾರಗೃಹಗಳು, ಮತ್ತು ಪ್ರಶಿಕ್ಷಣಾರ್ಥಿಗಳಿಗೆ ವಸತಿಗೃಹಗಳನ್ನು ಒಳಗೊಂಡಿರುತ್ತದೆ.

ಪೊಲೀಸ್ ತರಬೇತಿ ಮಹಾವಿದ್ಯಾಲಯಕ್ಕೆ ಆಗಮಿಸುತ್ತಿರುವ ಪ್ರಶಿಕ್ಷಣಾರ್ಥಿಗಳಿಗೆ ಒಟ್ಟು 11 ತಿಂಗಳ ಅವಧಿಗೆ ಬುನಾದಿ ತರಬೇತಿಯನ್ನು ನೀಡಲಾಗುತಿದ್ದು, ಈ ಅವಧಿಯಲ್ಲಿ ಒಳಾಂಗಣ ಮತ್ತು ಹೊರಾಂಗಣ ತರಬೇತಿಯ ಜೊತೆಗೆ ಪ್ರಶಿಕ್ಷಣಾರ್ಥಿಗಳ ಪ್ರತಿಭೆಯನ್ನು ಗುರುತಿಸಲು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಗುತ್ತದೆ. ಭಧ್ರತೆ ಹಾಗೂ ಕರ್ತವ್ಯದ ದೃಷ್ಟಿಯಿಂದ ಪ್ರಮುಖವಾಗಿರುವ ಸ್ಥಳಗಳಿಗೆ ಅಧ್ಯಯನ ಭೇಟಿಯನ್ನು ಮಾಡಲಾಗುತ್ತದೆ.

ವಿವಿಧ ವಿಷಯಗಳಲ್ಲಿ ವೃತ್ತಿಪರ ಕೌಶಲ್ಯತೆ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳಿಂದ ಹಾಗೂ ಅನುಭವವುಳ್ಳ ಪೊಲೀಸ್ ಅಧಿಕಾರಿಗಳಿಂದ ತರಬೇತಿಯನ್ನು ನೀಡಲಾಗುತ್ತದೆ.

ಪ್ರಶಿಕ್ಷಣಾರ್ಥಿಗಳಿಗೆ ಶಿಸ್ತು, ಸಮಯ ಪಾಲನೆಯೊಂದಿಗೆ, ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಗಾಗಿ ವ್ಯಾಯಾಮ, ಯೋಗ, ಕರಾಟೆ ಈಜು ತರಬೇತಿಯನ್ನು ನೀಡಲಾಗುತ್ತದೆ.

ತರಬೇತಿಯ ಅವಧಿಯಲ್ಲಿ ಮಧ್ಯಂತರ ಪರೀಕ್ಷೆ ಮುಗಿದ ನಂತರ ಪ್ರಶಿಕ್ಷಣಾರ್ಥಿಗಳು ಕಲಿತಂತಹ ವಿಷಯಗಳ ಕುರಿತು ಮನನ ಮಾಡಿಕೊಳ್ಳಲು ಸ್ಯಾಂಡವಿಚ್(ಎಫ.ಒ.ಎ) ಕೋರ್ಸಗೆ 1 ತಿಂಗಳ ಕಾಲ ಮಾತ್ರ ಘಟಕಕ್ಕೆ ಕಳುಹಿಸಿಕೊಡಲಾಗುತ್ತದೆ. ಜೊತೆಗೆ ಪೊಲೀಸ್ ಇಲಾಖೆಯ ಇತರೆ ಘಟಕಗಳಾದ ನಕ್ಸಲ್ ನಿಗ್ರಹ ದಳ, ಭಯೋತ್ಪಾದಕ ನಿಗ್ರಹ ಕೇಂದ್ರಗಳಿಗೂ ಸಹ ತರಬೇತಿಗಾಗಿ ಕಳುಹಿಸಲಾಗುತ್ತದೆ.

## II . ಹೊರಾಂಗಣ ತರಬೇತಿ

**ಅ) ಹೊರಾಂಗಣ ತರಬೇತಿ ನಿಯಮಗಳು :**

1) 5.45 a.m. ಗೆ ಪಿಟಿ ಸಮವಸ್ತ್ರದೊಂದಿಗೆ ನಿಗದಿಪಡಿಸಿದ ಸ್ಥಳದಲ್ಲಿ ಫಾಲಿನ್ ಆಗಬೇಕು ಜೊತೆಗೆ ಹೊರಾಂಗಣ ಸಮವಸ್ತ್ರ ತರಬೇಕು ಲಾಠಿ ಮತ್ತು ಶಸ್ತ್ರಗಳನ್ನು ತೆಗೆದುಕೊಂಡು ಶಿಸ್ತಿನಿಂದ ತುಕಡಿಯ ಜೊತೆಗೆ ಮೈದಾನಕ್ಕೆ ಬರತಕ್ಕದ್ದು.
2) 8.00 a.m. ಗೆ ವಿರಾಮ ಆದಾಗ ತುಕಡಿಯ ಜೊತೆ ತಮ್ಮ ತಮ್ಮ ಶಸ್ತ್ರಗಳನ್ನು ಶಸ್ತ್ರಗಾರದಲ್ಲಿ ಜಮಾ ಮಾಡಿ ತಮ್ಮ ಬ್ಯಾರೆಕ್‌ಗೆ ಹೋಗಬೇಕು.
3) 9.30 a.m.ಗೆ ಒಳಾಂಗಣ ಸಮವಸ್ತ್ರದಲ್ಲಿ ಹಾಜರಾತಿ ನೀಡಿ ಕ್ರಮಬದ್ದವಾಗಿ ತುಕಡಿಯ ಜೊತೆಯಲ್ಲಿ ಕ್ಲಾಸ್ ರೂಮ್‌ಗಳಿಗೆ ತೆರಳಬೇಕು.
4) 1.45 p.m. ಗೆ ಕ್ಲಾಸ್ ರೂಮ್‌ನಿಂದ ತುಕಡಿಯ ಜೊತೆ ಶಿಸ್ತಾಗಿ ಬ್ಯಾರೆಕ್‌ಗಳಿಗೆ ತೆರಳಬೇಕು
5) 3.30 p.m. ಗೆ ಹೊರಾಂಗಣ ಸಮವಸ್ತ್ರ ಹಾಕಿಕೊಂಡು ಶಸ್ತ್ರಗಾರದಿಂದ ಶಸ್ತ್ರಗಳನ್ನು ತೆಗೆದುಕೊಂಡು ಜೊತೆಗೆ ನಿಗದಿಪಡಿಸಿದ ಆಟದ ಸಮವಸ್ತ್ರಗಳನ್ನು ಮೈದಾನಕ್ಕೆ ತೆಗೆದುಕೊಂಡು ಬರಬೇಕು.
6) 6.00 p.m. ಗೆ ಮೈದಾನದಿಂದ ವಿರಾಮಗೊಂಡ ನಂತರ ತಮ್ಮ ಶಸ್ತ್ರಗಳನ್ನು ಶಸ್ತ್ರಗಾರದಲ್ಲಿ ಜಮಾ ಮಾಡಿ ಶಿಸ್ತುಬದ್ಧವಾಗಿ ತುಕಡಿಯ ಜೊತೆ ತೆರಳಿ ಬ್ಯಾರೆಕ್ ಮುಂದೆ ಹೋಗಿ ವಿರಾಮಗೊಂಡು ತಮ್ಮ ತಮ್ಮ ಕೊಠಡಿಗಳಿಗೆ ತೆರಳಬೇಕು.
7) 8.00 p.m. ಒಳಗಾಗಿ ಫಾರ್ಮಲ್ ಡ್ರೆಸ್ ಮತ್ತು ಫಾರ್ಮಲ್ ಶೂ ಧರಿಸಿಕೊಂಡು ಹಾಜರಾತಿಗಾಗಿ ತುಕಡಿಗಳಲ್ಲಿ ಫಾಲಿನ್ ಆಗಬೇಕು.
8) 10.00 p.m. ಗೆ ಎಲ್ಲ ಕೊಠಡಿಗಳಲ್ಲಿ ಲೈಟ್ ಆಫ್ ಮಾಡಿ ಮಲಗಿಕೊಂಡಿರಬೇಕು ಯಾವುದೇ ಕಾರಣಕ್ಕೂ ಫೋನಿನಲ್ಲಿ ಮಾತಾಡಿಕೊಂಡು ಹೊರಗಡೆ ತಿರುಗಾಡಕೂಡದು.
9) ಬಿಡುವಿನ ಸಮಯದಲ್ಲಿ ತರಬೇತಿ ಮಹಾವಿದ್ಯಾಲಯದ ಆವರಣದಲ್ಲಿ ಫಾರ್ಮಲ್ ಡ್ರೆಸ್ ಮತ್ತು ಫಾರ್ಮಲ್ ಶೂ ಗಳನ್ನು ಕಡ್ಡಾಯವಾಗಿ ಧರಿಸಿರತಕ್ಕದ್ದು.

**ಆ) ಹೊರಾಂಗಣ ತರಬೇತಿಯ ವಿವರ :**

| **SI No** | **Month** | **Outdoor Schedule** |
|---|---|---|
| 01 | December | Zero Week , PET, PT[1] , Drill[2] (without Arms), Riot control Drill[4] ( Lathi) |
| 02 | January | PT[1], Table Cards exercises (1 to 3 ) , UAC[7] , Misc.[6] (Swimming) , Weapon Training[3] (.303, SLR, 9mm ), Games[8] |
| 03 | February | PT[1], 1 &1 Minute exercise (1 to 5), Yoga , Field Craft[5] & Map Reading (Introduction), Field Visit, Games[8]<br>**1st Periodical exam** |
| 04 | March | PT[1], Obstacle Course, Drill[2] (with Arms), Misc.[6] (Motor Driving) , Weapon Training[3] ( INSAS, AK, CMG), Games[8] |
| 05 | April | PT[1], UAC[7], Riot control Drill[4] ( Tear Smoke ), Field Craft[5] (Field Signals, Section Formations & Ambush), Field Visit , Games[8] |
| 06 | May | PT[1], Drill[2] (Ceremonial & sword Drill), Games[8]<br>**Mid-Term Exam, FOA** |
| 07 | June | PT[1], Table Cards (4 to 6), Drill[2] (Guard & Sentry and Guard of Honor ), Riot control Drill[4] (Crowd Control/MOB Operation) , Games[8] |
| 08 | July | PT[1], 1 & 1 Minute Exercise (6 to 10) , Drill[2] ( Cane Drill) , Field Craft[5] (ROP, Urban Tactics ) , Field Visit, Weapon Training[3] , Games[8] |
| 09 | August | PT[1], UAC[7], Drill[2] , Misc.[6] ( Fire fighting & Fire Prevention and Escorting & Guarding Prisoners ), Games[8]<br>**2nd Periodical Exam** |
| 10 | September | PT[1], UAC[7], Weapon Training[3], Field Visit , Field Craft[5] ( Route March), Riot control Drill[4] , Misc.[6] , Games |
| 11 | October | PT[1], Revision Classes<br>**Final Exam**<br>**POP Practice** |
| 12 | November | POP |

**ಇ) ಹೊರಾಂಗಣ ವಿಭಾಗದ ಪರೀಕ್ಷಾ ವಿಧಾನ:**

- ತರಬೇತಿ ಅವಧಿಯಲ್ಲಿ ಹೊರಾಂಗಣ ಪರೀಕ್ಷೆಗಳನ್ನು ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತದೆ.

| Sl no | Exam details | Schedule | Marks |
|---|---|---|---|
| 01 | 1st Periodical exam | Last week of 2nd month | Each Subject 50 |
| 02 | Mid-term exam | Third week of 5th month | Each Subject 100 |
| 03 | 2nd Periodical exam | Last week of 8th month | Each Subject 50 |
| 04 | Final exam | First week of 11th month | Full marks of concerned subjects |

- ಅಂತಿಮ ಪಲಿತಾಂಶವನ್ನು ನೀಡುವಾಗ ಎರಡು ನಿಯತಕಾಲಿಕ ಪರೀಕ್ಷೆಗಳಲ್ಲಿ(Periodical exams) ಉತ್ತಮ ಅಂಕಗಳ ಒಂದು ನಿಯತಕಾಲಿಕ ಪರೀಕ್ಷೆಯ ಸರಾಸರಿಯ **ಶೇ10 ರಷ್ಟು ಅಂಕಗಳನ್ನು** ಮತ್ತು ಮಧ್ಯವಾರ್ಷಿಕ ಪರೀಕ್ಷೆಯ ಅಂಕಗಳ **ಶೇ30 ರಷ್ಟು ಅಂಕಗಳನ್ನು** ಮತ್ತು ಅಂತಿಮ ಪರೀಕ್ಷೆಯ ಅಂಕಗಳ **ಶೇ.60 ರಷ್ಟು ಅಂಕಗಳನ್ನು** ಅಂತಿಮ ಪರೀಕ್ಷೆಯ ಮೌಲ್ಯಮಾಪನಕ್ಕೆ ಪರಿಗಣಿಸಿ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು.

- ಯಾವುದೇ ರೀತಿಯ ಪರೀಕ್ಷಾ ದುರ್ವವ್ಯಹಾರ ಕಂಡುಬಂದಲ್ಲಿ ಅಂತಹ ಪ್ರಶಿಕ್ಷಣಾರ್ಥಿಗಳನ್ನು ಸೇವೆಯಿಂದ ವಜಾ ಮಾಡಲಾಗುವುದು.

# III . ಒಳಾಂಗಣ ತರಬೇತಿ

## ಅ) ಒಳಾಂಗಣ ತರಬೇತಿ ನಿಯಮಗಳು :

- ಒಳಾಂಗಣ ತರಬೇತಿಯಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಪೊಲೀಸ್ ಇಲಾಖೆಯ ಬಗ್ಗೆ, ಪೊಲೀಸ್ ಕರ್ತವ್ಯ ಪಾಲನೆಯಲ್ಲಿ ಬೇಕಾಗುವ ಶಿಸ್ತು, ಸಂಯಮ, ವೈಜ್ಞಾನಿಕವಾಗಿ ಅಪರಾಧ ತಡೆಗಟ್ಟಲು ಹಾಗೂ ಪತ್ತೆಹಚ್ಚಲು ಬೇಕಾಗುವ ನೈಪುಣ್ಯತೆ ಕಾನೂನಿನ ಬಗ್ಗೆ ಅರಿವು ಮತ್ತು ಮಾನಸಿಕ ಸಧೃಡತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಬೇಕಾಗುವ ವಿಷಯಗಳ ಬಗ್ಗೆ ಉತ್ತಮವಾದ ತರಬೇತಿಯನ್ನು ನೀಡಲಾಗುತ್ತದೆ.
- ಒಳಾಂಗಣ ತರಬೇತಿಯಲ್ಲಿ ಹಿಂದಿ  ಮತ್ತು ಆಂಗ್ಲ ಭಾಷೆಯನ್ನೊಳಗೊಂಡಂತೆ ಒಟ್ಟು 13 ವಿಷಯಗಳು ಇರುತ್ತವೆ.
- ಒಳಾಂಗಣ ತರಬೇತಿಯು ಬೆಳಿಗ್ಗೆ 10–00 ಗಂಟೆಯಿಂದ ಮದ್ಯಾಹ್ನ: 2:00 ಗಂಟೆಗಳ ವರೆಗೆ ಇರುತ್ತದೆ. ಪ್ರತಿ ದಿನ 45 ನಿಮಿಷಗಳ ಒಂದು ಅವಧಿಯ ಒಟ್ಟು 5 ಅವಧಿಗಳ ತರಗತಿಗಳು ಇರುತ್ತವೆ.
- ಪ್ರಶಿಕ್ಷಣಾರ್ಥಿಗಳು ತಮಗೆ ಸೂಚಿಸಿದ ಸಮವಸ್ತ್ರದಲ್ಲಿ ತರಬೇತಿಗೆ ಶಿಸ್ತಿನಿಂದ ಹಾಜರಾಗುವದು.
- ಪ್ರತಿದಿನ ತರಗತಿ ಪ್ರಾರಂಭವಾಗುವ 10 ನಿಮಿಷಗಳ ಮುಂಚೆಯೇ ಪ್ರಶಿಕ್ಷಣಾರ್ಥಿಗಳು ತರಗತಿಯಲ್ಲಿ ಹಾಜರಾಗಿರಬೇಕು.
- ತರಗತಿಯಲ್ಲಿ ಎದೆ ಸಂಖ್ಯೆಗೆ ಅನುಗುಣವಾಗಿ ಒಂದು ದಿನ ಮುಂದಿನಿಂದ ಹೊಂದಿಸಿಕೊಂಡು ಇನ್ನೊಂದು ದಿನ ಹಿಂದಿನಿಂದ ಸರಿಹೊಂದಿಸಿಕೊಂಡು ಕೂಡಬೇಕು.
- ಪ್ರಶಿಕ್ಷಣಾರ್ಥಿಗಳು ತರಗತಿಗೆ ಹಾಜರಾಗಲು ಕೇವಲ ಪಠ್ಯಕ್ರಮಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಮತ್ತು ನೋಟಬುಕ್‌ಗಳನ್ನು ಮಾತ್ರ ತರತಕ್ಕದ್ದು.
- ಪ್ರಶಿಕ್ಷಣಾರ್ಥಿಗಳು ತರಗತಿಗೆ ಮೊಬೈಲ್ ಅಥವಾ ಎಲೆಕ್ಟ್ರಾನಿಕ್ಸ ಉಪಕರಣಗಳನ್ನು ತರುವುದು ಕಡ್ಡಾಯವಾಗಿ ನಿಷೇಧಿಸಲಾಗಿದೆ.
- ತರಗತಿಯ ಕೊಠಡಿಗಳ ಹೊರಗೆ ಅನಾವಶ್ಯಕವಾಗಿ ತಿರುಗಾಡುವಂತಿಲ್ಲ.
- ಅಲ್ಪವಿರಾಮದ ವೇಳೆ ಗುಂಪಾಗಿ ನಿಲ್ಲುವಂತಿಲ್ಲ.
- ತರಗತಿಗೆ ಯಾವುದೆ ಕಾರಣಕ್ಕೂ ವಾರ್ತಾ ಪತ್ರಿಕೆಗಳನ್ನು, ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕಗಳನ್ನು ಮತ್ತು ತಿನಿಸುಗಳನ್ನು ತರುವಂತಿಲ್ಲ.
- ಒಳಾಂಗಣ ಬೋಧಕ ಸಿಬ್ಬಂದಿಯವರೊಂದಿಗೆ ಅನುಚಿತವಾಗಿ ಅಶಿಸ್ತಿನಿಂದ ವರ್ತಿಸುವಂತಿಲ್ಲ.
- ತರಗತಿ ನಡೆಯುವ ವೇಳೆಯಲ್ಲಿ ಸಹ ಪ್ರಶಿಕ್ಷಣಾರ್ಥಿಗಳೊಂದಿಗೆ ಅನಾವಶ್ಯಕವಾಗಿ ಮಾತಾಡುವಂತಿಲ್ಲ.

## ಇ) ಒಳಾಂಗಣ ತರಬೇತಿಯ ವಿವರ :

| Schedule | 1st Month December | 2nd Month January | 3rd Month February | 4th Month March | 5th Month April | 6th Month May | 7th Month June | 8th Month July | 9th Month August | 10th Month September | 11th Month October |
|---|---|---|---|---|---|---|---|---|---|---|---|
| 12Total Periods | 96 | 144 | 144 | 138 | 138 | 144 | 138 | 150 | 150 | 138 | 132 |
| Exams | - | - | P-1 -12 | - | Mid -36 | Mid break-36 | - | - | P-2 -12 | - | 1)Final Indoor-42<br>2)& outdoor - 42<br>3)POP Prctice- 48 |
| Field Visits | - | F.V -6 | 1) F.V -6<br>2) PDMS-60 | - | | F.T-108 | 1)F.T-72<br>2)CCT-66 | ANF-72 | F.V -6 | - | |
| Total Periods Available | 96 | 138 | 66 | 138 | 102 | 00 | 00 | 78 | 132 | 138 | 00 |

- **For 2nd month 20% of all subjects are to be covered**
- **For 4th month 40% of all subjects are to be covered**
- **For 5th month 50% of all subjects are to be covered**
- **For 7th month 60% of all subjects are to be covered**
- **For 8th month 70% of all subjects are to be covered**
- **For 10th month 100% of all subjects are to be covered**

**ಆ) ಒಳಾಂಗಣ ವಿಭಾಗದ ಪರೀಕ್ಷಾ ವಿಧಾನ:**

- ತರಬೇತಿ ಅವಧಿಯಲ್ಲಿ ಒಳಾಂಗಣ ಪರೀಕ್ಷೆಗಳನ್ನು ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತದೆ.

| Sl no | Exam details | Schedule | Marks |
|---|---|---|---|
| 01 | 1st Periodical exam | Last week of 2nd month | Each Subject 25 |
| 02 | Mid-term exam | Third week of 5th month | Each Subject 50 |
| 03 | 2nd Periodical exam | Last week of 8th month | Each Subject 25 |
| 04 | Final exam | First week of 11th month | Full marks of concerned subjects |

- ಅಂತಿಮ ಪಲಿತಾಂಶವನ್ನು ನೀಡುವಾಗ ಎರಡು ನಿಯತಕಾಲಿಕ ಪರೀಕ್ಷೆಗಳಲ್ಲಿ(Periodical exams) ಉತ್ತಮ ಅಂಕಗಳ ಒಂದು ನಿಯತಕಾಲಿಕ ಪರೀಕ್ಷೆಯ ಸರಾಸರಿಯ **ಶೇ10 ರಷ್ಟು ಅಂಕಗಳನ್ನು** ಮತ್ತು ಮಧ್ಯವಾರ್ಷಿಕ ಪರೀಕ್ಷೆಯ ಅಂಕಗಳ **ಶೇ30 ರಷ್ಟು ಅಂಕಗಳನ್ನು** ಮತ್ತು ಅಂತಿಮ ಪರೀಕ್ಷೆಯ ಅಂಕಗಳ **ಶೇ.60 ರಷ್ಟು ಅಂಕಗಳನ್ನು** ಅಂತಿಮ ಪರೀಕ್ಷೆಯ ಮೌಲ್ಯಮಾಪನಕ್ಕೆ ಪರಿಗಣಿಸಿ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು.

- ಯಾವುದೇ ರೀತಿಯ ಪರೀಕ್ಷಾ ದುರ್ವವ್ಯಹಾರ ಕಂಡುಬಂದಲ್ಲಿ ಅಂತಹ ಪ್ರಶಿಕ್ಷಣಾರ್ಥಿಗಳನ್ನು ಸೇವೆಯಿಂದ ವಜಾ ಮಾಡಲಾಗುವುದು.

## IV . ರಜೆ/ಕಾಯಿಲೆ/ಸ್ಪರ್ಧಾತ್ಮಕ ಪರೀಕ್ಷೆಗಳ ಅನುಮತಿ :

- ಪ್ರಶಿಕ್ಷಣಾರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಯಾವುದೇ ತರಹದ ರಜೆಗಳನ್ನು ನೀಡಲಾಗುವುದಿಲ್ಲ.
- ತರಬೇತಿ ವೇಳೆಯಲ್ಲಿ ಪ್ರಶಿಕ್ಷಣಾರ್ಥಿಗಳ ನಿಶ್ಚಿತಾರ್ಥ, ಮದುವೆ ಅಥವಾ ಇನ್ನಿತರ ಕಾರ್ಯಕ್ರಮಗಳಿಗೆ ರಜೆಗಳನ್ನು ನೀಡಲಾಗುವುದಿಲ್ಲ.
- ತುರ್ತು ಸಂದರ್ಭವಿದ್ದಲ್ಲಿ ಮಾತ್ರ ರಜೆಯನ್ನು ನೀಡಲಾಗುವುದು.
- ಮೇಲೆ ಹೇಳಿದ ತುರ್ತು ಸಂದರ್ಭಗಳಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ರಜೆ ಬೇಕಾದಲ್ಲಿ ಪ್ರಶಿಕ್ಷಣಾರ್ಥಿಗಳು ನಿಗದಿತ ನಮೂನೆಯಲ್ಲಿ ರಜಾ ಅರ್ಜಿಯನ್ನು ಭರ್ತಿಮಾಡಿ, ರಜೆ ಅವಧಿಯಲ್ಲಿ ಪ್ರಶಿಕ್ಷಣಾರ್ಥಿಗಳು ತಮ್ಮ ಇರುವಿಕೆಯ ವಿಳಾಸವನ್ನು ಮತ್ತು ಸಂಪರ್ಕಿಸಲು ಮೊಬೈಲ್ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಿ ಸಿಡಿಐ ರವರ ಮುಂಖಾಂತರ ಸಲ್ಲಿಸುವುದು.
- ಅಂತಹ ಸಂದರ್ಭದಲ್ಲಿಯೂ ಪರಿಶೀಲನೆ ನಂತರ ರಜೆಯ ಮಂಜೂರಾತಿ ಅಥವಾ ರಜಾ ಅರ್ಜಿ ತಿರಸ್ಕೃತಗೊಂಡ ಬಗ್ಗೆ ಸಿ.ಡಿ.ಐ.ರವರು ಮಾಹಿತಿ ನೀಡುವರು.
- ರಜೆ ಮಂಜೂರಾದ ಬಗ್ಗೆ ಕರ್ತವ್ಯದಲ್ಲಿರುವ ಎಡಿಐ ರವರಿಗೆ ಮಾಹಿತಿ ನೀಡಿ, ನಂತರ ಮುಖ್ಯದ್ವಾರದಲ್ಲಿರುವ ರಜಾ ಮಾಹಿತಿ ನೋಂದಣಿ ಪುಸ್ತಕದಲ್ಲಿ ನಮೂದಿಸಿ ರಜೆ ಮೇಲೆ ತೆರಳುವುದು ಕಡ್ಡಾಯ ಪ್ರಕ್ರಿಯೆಯಾಗಿದೆ.
- ರಜೆಯಿಂದ ಮರಳುವ ಪ್ರಶಿಕ್ಷಣಾರ್ಥಿಗಳು ಬೆಳಿಗ್ಗೆ 08:00 ಗಂಟೆಯೊಳಗಾಗಿ ಮುಖ್ಯದ್ವಾರದಲ್ಲಿರುವ ರಜೆ ಮಾಹಿತಿ ನೋಂದಣಿ ಪುಸ್ತಕದಲ್ಲಿ ನಮೂದಿಸಿ ಸಮವಸ್ತ್ರದಲ್ಲಿ ಸಿಡಿಐ ರವರಲ್ಲಿ ತರಬೇತಿಗೆ ವರದಿ ಮಾಡುವುದು.
- ಪ್ರಶಿಕ್ಷಣಾರ್ಥಿಗಳು ಇಲಾಖೆಯಿಂದ ಅನುಮತಿ ಪಡೆದು, ಉನ್ನತ ಹುದ್ದೆಗೆ ಮಾತ್ರ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಹಾಗೂ ಇಲಾಖಾ ಪರೀಕ್ಷೆಗಳನ್ನು ಬರೆಯಲು ಅನುಮತಿ ನೀಡಲಾಗುತ್ತದೆ.
- ಪ್ರಶಿಕ್ಷಣಾರ್ಥಿಗಳಿಗೆ ಆರೋಗ್ಯ ಸಮಸ್ಯೆಯಾದರೆ, ಎ.ಡಿ.ಐ. ರವರೊಂದಿಗೆ ಕೆಂದ್ರದ ವಾಹನದಲ್ಲಿ ಸಂಬಂಧಪಟ್ಟ ವೈದ್ಯರಲ್ಲಿ ಚಿಕಿತ್ಸೆಯನ್ನು ಕೊಡಿಸಲಾಗುವುದು.
- ಪ್ರಶಿಕ್ಷಣಾರ್ಥಿಗಳು ಉಪಯೋಗಿಸಿಕೊಂಡ ರಜಾ/ಕಾಯಿಲೆ ಹಾಗೂ ಪರೀಕ್ಷೆಗೆ ಅನುಮತಿ ಪಡೆದ ಅವಧಿಯ ಕೊರತೆಯನ್ನು ಸಾರ್ವತ್ರಿಕ ರಜಾ ದಿನಗಳಲ್ಲಿ ಹೆಚ್ಚಿನ ತರಗತಿಗಳನ್ನು ನೀಡಿ ಪೂರ್ಣಗೊಳಿಸಲಾಗುವುದು.

## V . ಮೆಸ್(ಭೋಜನಾಲಯ) :

- ಪೊಲೀಸ್ ತರಬೇತಿ ಕೇಂದ್ರದಲ್ಲಿ ಸುಸಜ್ಜಿತವಾದ ಭೋಜನಾಲಯವಿದ್ದು, ಬೆಳಗಿನ ಉಪಹಾರ, ಮಧ್ಯಾಹ್ನದ ಹಾಗೂ ರಾತ್ರಿಯ ಭೋಜನವನ್ನು ನೀಡಲಾಗುತ್ತದೆ. ಸಮಯ ಪರಿಪಾಲನೆ ಕಡ್ಡಾಯವಾಗಿದೆ.
- ಬೆಳಗಿನ ಉಪಹಾರದ ಸಮಯ 8 ರಿಂದ 8.45 ಗಂಟೆಯ ವರೆಗೆ
- ಮಧ್ಯಾಹ್ನದ ಊಟದ ಸಮಯ 2–15 ರಿಂದ 3 ಗಂಟೆಯ ವರೆಗೆ
- ರಾತ್ರಿ ಊಟದ ಸಮಯ 8 ಗಂಟೆಯಿಂದ 9 ಗಂಟೆಯ ವರೆಗೆ
- ಪ್ರಶಿಕ್ಷಣಾರ್ಥಿಗಳು ಭೋಜನಾಲಯಕ್ಕೆ ಹೋಗುವಾಗ ಪುರುಷ ಪ್ರಶಿಕ್ಷಣಾರ್ಥಿಗಳು ತುಂಬು ತೋಳಿನ ಅಂಗಿಯನ್ನು ಮತ್ತು ಫಾರ್ಮಲ್ ಪ್ಯಾಂಟ್ ಧರಿಸಿ ಇನ್ ಶರ್ಟ ಮಾಡಿಕೊಂಡು ಪಾರ್ಮಲ್ ಶೂ–ಧರಿಸಿಕೊಂಡಿರಬೇಕು. ಮಹಿಳಾ ಪ್ರಶಿಕ್ಷಣಾರ್ಥಿಗಳು ಚೂಡಿದಾರ/ಸೀರೆ ಧರಿಸಿ ಪಾರ್ಮಲ್ ಶೂ–ಧರಿಸಿಕೊಂಡಿರಬೇಕು.
- ಭೋಜನಾಲಯದಲ್ಲಿ ಸಾಲಿನಲ್ಲಿ ನಿಂತು ಶಿಸ್ತು ಬದ್ಧವಾಗಿ ಭೋಜನವನ್ನು ಪಡೆದು ಭೋಜನಾಲಯದಲ್ಲಿರುವ ಕುರ್ಚಿಗಳ ಮೇಲೆ ಕುಳಿತು ಊಟವನ್ನು ಸೇವಿಸುವುದು. ಯಾವುದೆ ಕಾರಣಕ್ಕೆ ಭೋಜನವನ್ನು ಹೊರಗಡೆ ಅಥವಾ ವಸತಿಗೃಹಕ್ಕೆ ತೆಗೆದುಕೊಂಡು ಹೋಗತಕ್ಕದಲ್ಲ.
- ಪ್ರಶಿಕ್ಷಣಾರ್ಥಿಗಳಿಗೆ ಭೋಜನಾಲಯದ ಅಡಿಗೆ ಕೋಣೆ ಮತ್ತು ದಾಸ್ತಾನು ಕೋಣೆಗೆ ಪ್ರವೇಶ ನಿಷೇಧಿಸಿದೆ.
- ಬೋಜನಾಲಯದ ಮೆನು ಮುಂಚೆಯೆ ನಿರ್ಧಾರಿತವಾಗಿದ್ದು ಶಾಖಾಹಾರಿ ಹಾಗೂ ಮಾಂಸಾಹಾರಿ ಅಡಿಗೆಗಳು ಇದರಲ್ಲಿ ಸೇರಿವೆ. ಪ್ರಶಿಕ್ಷಣಾರ್ಥಿಗಳಿಗೆ ಮೆನುವಿನ ಬದಲಾವಣೆಯಲ್ಲಿ ಅವಕಾಶವಿರುವುದಿಲ್ಲ.
- ಮೆನುವಿನ ತುರ್ತು ಬದಲಾವಣೆಯ ಮೆಸ್ ಕಮಿಟಿ ಹಾಗೂ ಮೆಸ್ ಉಸ್ತುವಾರಿ ಅಧಿಕಾರಿ ಯವರ ಪೂರ್ವಾನುಮತಿಯೊಂದಿಗೆ ಆಗುತ್ತದೆ.
- ಮೆಸ್ ಕರ್ತವ್ಯದ ಯಾವುದೇ ಸಿಬ್ಬಂದಿಯೊಂದಿಗೆ ಯಾವುದೇ ವ್ಯವಹರಿಸುವುದು ನಿಷೇಧಿಸಿದೆ.
- ಭೋಜನಾಲಯದಲ್ಲಿ ಆಹಾರ ವ್ಯರ್ಥ ಮಾಡುವಂತಿಲ್ಲ ಹಾಗೂ ಭೋಜನಾಲಯದಲ್ಲಿ ಶುಚಿತ್ವವನ್ನು ಕಡ್ಡಾಯವಾಗಿ ಕಾಪಾಡುವುದು.
- ಪ್ರತಿತಿಂಗಳ ಮೊದಲ ವಾರದಲ್ಲಿ ಮೆಸ್ ಬಿಲ್ ಕಡ್ಡಾಯವಾಗಿ ಪಾವತಿಸಬೇಕು.
- ಭೋಜನಾಲಯದಲ್ಲಿ ಸಾಮಾನ್ಯ ಸಮಸ್ಯೆಗಳೇನಾದರೂ ಇದ್ದಲ್ಲಿ ಮೆಸ್ ಸದಸ್ಯರ ಗಮನಕ್ಕೆ ತರುವುದು.
- ತರಬೇತಿ ಮುಕ್ತಾಯಗೊಂಡು ತೆರಳುವಾಗ ಭೋಜನಾಲಯದ ಉಸ್ತುವಾರಿ ಅಧಿಕಾರಿಯವರಿಂದ NOC(ನಿರಾಕ್ಷೇಪಣಾ ಪತ್ರ) ಕಡ್ಡಾಯವಾಗಿ ಪಡೆಯಬೇಕು.

## VI .ವಸತಿ ಗೃಹದ ಬಳಕೆ ಮತ್ತು ನಿರ್ವಹಣೆ:

- ಪ್ರತಿ ಹಾಸ್ಟೆಲ್ ಬ್ಲಾಕ್ ನಿರ್ವಹಣೆಗಾಗಿ ಆ ಬ್ಲಾಕ್‌ನ ಪ್ರಶಿಕ್ಷಣಾರ್ಥಿಗಳನ್ನು ಒಳಗೊಂಡ ಹಾಸ್ಟೆಲ್ ಬ್ಲಾಕ್ ಕಮಿಟಿಯನ್ನು ರಚಿಸಲಾಗುತ್ತದೆ.
- ಹಾಸ್ಟೆಲ್ ಬ್ಲಾಕ್ ಕಮಿಟಿಯು ಒಂದು ಪಟ್ಟಿಯನ್ನು ನಿರ್ವಹಿಸಿ ಅದರಲ್ಲಿ ಪ್ರತಿ ಮಹಡಿಯ ಒಬ್ಬ ಪ್ರಶಿಕ್ಷಣಾರ್ಥಿ ಪ್ರತಿ ದಿನದಂತೆ ಡಸ್ಟಬಿನ್‌ನ್ನು ನಿರ್ವಹಿಸುವುದು. ಈ ಪಟ್ಟಿಯನ್ನು ಕಾಣುವಂತೆ ಪ್ರತಿ ಮಹಡಿಯಲ್ಲಿ ಅಂಟಿಸುವುದು.
- ಹಾಸ್ಟೆಲ್ ಬ್ಲಾಕ್ ಕಮಿಟಿಯು ನೀರು ಸರಬರಾಜು / ವಿದ್ಯುತ್ ಸೌಕರ್ಯ / ಕಟ್ಟಡದ ದುರಸ್ತಿ ಸಂಬಂಧಿಸಿದ ಪ್ರತಿ ಸಮಸ್ಯೆಯನ್ನು ಕೂಡಲೇ ಲಿಖಿತದಲ್ಲಿ ಬ್ಲಾಕ್ ಉಸ್ತುವಾರಿ ಅಧಿಕಾರಿ ರವರಿಗೆ ಸಲ್ಲಿಸಬೇಕು.
- ಹಾಸ್ಟೆಲ್ ಬ್ಲಾಕ್ ಕಮಿಟಿಯು ಬ್ಲಾಕ್ ಒಳಗಡೆ/ಹೊರಗಡೆ ಸ್ವಚ್ಛತೆ ಹಾಗೂ ಗಿಡಗಳ ನಿರ್ವಹಣೆಯನ್ನು ಬ್ಲಾಕ್ ನಲ್ಲಿ ವಸತಿಯಿರುವ ಎಲ್ಲ ಪ್ರಶಿಕ್ಷಣಾರ್ಥಿಗಳೊಂದಿಗೆ ನಿರ್ವಹಿಸುವುದು.

## VII. ತರಬೇತಿ ಮಹಾವಿದ್ಯಾಲಯ ದಿಂದ ಹೊರಹೋಗಲು / ಸಂದರ್ಶಕರನ್ನು ಭೇಟಿಯಾಗಲು/ ಅಂಗಡಿಯಲ್ಲಿ ಅವಶ್ಯಕ ವಸ್ತುಗಳು ಖರೀದಿಸಲು ನಿಯಮಗಳು:

- ಪೊಲೀಸ್ ತರಬೇತಿ ಮಹಾವಿದ್ಯಾಲಯದ ಮುಖ್ಯದ್ವಾರದ ಹೊರಗಡೆ ಇರುವ ಬೇಕರಿ ಅಂಗಡಿಯಲ್ಲಿ ತಮಗೆ ಬೇಕಾದ ವಸ್ತುಗಳನ್ನು ಖರೀದಿಸಲು ಸಮಯ ಸಂಜೆ 6.30 ಯಿಂದ 7.30 ಗಂಟೆಯ ವರೆಗೆ ನಿಗಡಿಪಡಿಸಲಾಗಿದ್ದು ಪ್ರತಿಯೊಬ್ಬ ಪ್ರಶಿಕ್ಷಣಾರ್ಥಿಗೆ ಕೇವಲ 10 ನಿಮಿಷ ಮಾತ್ರ ನಿಡಲಾಗುತ್ತದೆ.
- ವಸ್ತುಗಳನ್ನು ಖರೀದಿಸಲು ಹೋಗುವಾಗ ಮುಖ್ಯದ್ವಾರದಲ್ಲಿರುವ ರಜಿಸ್ಟರ್‌ನಲ್ಲಿ ಹೊರಹೋದ ಮತ್ತು ಬಂದ ಸಮಯವನ್ನು ತಪ್ಪದೆ ನಮೂದಿಸತಕ್ಕದ್ದು.
- ಮುಖ್ಯದ್ವಾರದ ಹತ್ತಿರ ಪ್ರಶಿಕ್ಷಣಾರ್ಥಿಗಳು ಗುಂಪಾಗಿ ನಿಲ್ಲುವುದು ಅನಾವಶ್ಯಕವಾಗಿ ಮಾತನಾಡುವುದು ನಿಷೇಧಿಸಲಾಗಿದೆ.
- ಸಂಬಂಧಿಕರು ಭೇಟಿಗಾಗಿ ತರಬೇತಿ ಕೇಂದ್ರಕ್ಕೆ ಆಗಮಿಸಿದಲ್ಲಿ ಹೊರಾಂಗಣ ಡಿಎಸ್‌ಪಿ ರವರ ಅನುಮತಿಯನ್ನು ಪಡೆದು ಭೇಟಿಯಾಗುವುದು ಮತ್ತು ಭೇಟಿಯಾಗಲು ಬಂದ ಸಂಬಂಧಿಕರ ಹೆಸರು ವಿಳಾಸ ಪ್ರಶಿಕ್ಷಣಾರ್ಥಿಗಳೊಂದಿಗಿನ ಸಂಬಂಧ ಭೇಟಿಯಾಗಲು ಬಂದ ಮತ್ತು ಹೋದ ಸಮಯ ರಜಿಸ್ಟರನಲ್ಲಿ ನಮೂದಿಸುವುದು.
- ಪ್ರತಿಭಾನುವಾರ ಶ್ರಮದಾನದ ನಂತರ ಬೆಳಿಗ್ಗೆ 10:00 ಗಂಟೆಯಿಂದ ರಾತ್ರಿ 7:30 ಗಂಟೆಯವರೆಗೆ ಪ್ರಶಿಕ್ಷಣಾರ್ಥಿಗಳಿಗೆ ಔಟ್ ಪಾಸ್ ನೀಡಲಾಗುವುದು.

## VIII ಪಿಟಿಸಿಯ ಅಧಿಕಾರಿ ಮತ್ತು ಎ.ಡಿ.ಐ ಗಳೊಂದಿಗೆ ಪ್ರಶಿಕ್ಷಣಾರ್ಥಿಗಳ ವರ್ತನೆ :

1) ತರಬೇತಿ ಮಹಾವಿದ್ಯಾಲಯದಲ್ಲಿ ಡಿವೈ.ಎಸ್.ಪಿ(ಒಳಾಂಗಣ), ಡಿವೈ.ಎಸ್.ಪಿ(ಹೊರಾಂಗಣ), ಪಿ.ಐ, ಆರ್.ಪಿ.ಐ, ಪಿ.ಎಸ್.ಐ, ಎಡಿಐ, ಎಸಿಡಿಐ, ರವರನ್ನು ಕಂಡಾಗ ಅಥವಾ ಅವರು ಕರೆದಾಗ ಇಲಾಖಾ ಗೌರವವನ್ನು ಸಲ್ಲಿಸಬೇಕು.

2) ಮೇಲೆ ಉಲ್ಲೇಖಿಸಿದವರೊಂದಿಗೆ ವ್ಯವಹರಿಸುವಾಗ ಶಿಸ್ತಿನಲ್ಲಿ ನಿಂತಿರಬೇಕು. ಅಸಭ್ಯವಾಗಿ ವರ್ತಿಸಬಾರದು ಮತ್ತು ವಾದಿಸಬಾರದು.

3) ನೇರವಾಗಿ ಮೇಲಾಧಿಕಾರಿಗಳನ್ನು ಬೇಟಿ ಮಾಡುವಂತಿಲ್ಲ. ಒಂದು ವೇಳೆ ಮೇಲಾಧಿಕಾರಿಗಳನ್ನು ಬೇಟಿ ಮಾಡಲೇ ಬೇಕಾದ ಅಗತ್ಯವಿದ್ದಲ್ಲಿ ಡ್ಯೂಟಿ ಎಡಿಐ ರವರಿಗೆ ಮಾಹಿತಿ ನೀಡಿ ಅವರೊಂದಿಗೆ ಮಾತ್ರ ಮೇಲಾಧಿಕಾರಿಗಳನ್ನು ಕಾಣತಕ್ಕದ್ದು.

## IX .ಶಿಸ್ತು ಸಮಿತಿ:

- ಪೊಲೀಸ್ ತರಬೇತಿ ಮಹಾವಿದ್ಯಾಲಯದಲ್ಲಿ ಒರ್ವ ಡಿ.ಎಸ್.ಪಿ ದರ್ಜೆಯ ಅಧಿಕಾರಿ ನೇತೃತ್ವದಲ್ಲಿ ಶಿಸ್ತು ಸಮಿತಿಯನ್ನು ರಚಿಸಲಾಗಿದೆ.
- ತರಬೇತಿ ಮಹಾವಿದ್ಯಾಲಯದ ಹೊರಾಂಗಣ/ಒಳಾಂಗಣ ತರಗತಿಗಳಲ್ಲಿ, ಹಾಸ್ಟೆಲ್ ಬ್ಲಾಕನಲ್ಲಿ ಮೆಸ್‌ನಲ್ಲಿ, ಗ್ರಂಥಾಲಯದಲ್ಲಿ ಈಗಾಗಲೇ ನೀಡಲಾಗಿರುವ ನಿಯಮಗಳನ್ನು ಉಲ್ಲಂಘಿಸುವ ಪ್ರಶಿಕ್ಷಣಾರ್ಥಿಗಳು ಶಿಸ್ತು ಸಮಿತಿಯ ಮುಂದೆ ಹಾಜರಾಗಬೇಕು.
- ಶಿಸ್ತು ಸಮಿತಿಯು ನಿಯಮ ಉಲ್ಲಂಘಿಸಿರುವ ಪ್ರಶಿಕ್ಷಣಾರ್ಥಿಯ ವಿಚಾರಿಸಿ ವಿಚಾರಣಾ ವರದಿಯನ್ನು ಮಾನ್ಯ ಪ್ರಾಂಶುಪಾಲರಿಗೆ ಸಲ್ಲಿಸುವುದು.

*******